# ಸ್ತ್ರೀವಾದಿ ಮತ್ತು ಮಹಿಳಾ ಮನೋವಿಜ್ಞಾನ

## ಇಂದಿರಾ ಜೈಪ್ರಕಾಶ್

ಮಹಿಳೆಯ ಅನುಭವ, ಅವಳ ವ್ಯಕ್ತಿತ್ವ, ಅವಳಿಗೇ ವಿಶಿಷ್ಟವಾದ ದೈಹಿಕ ಸಂಭವಗಳು, ಅವಳ ಸಾಮಾಜಿಕ ಮತ್ತು ವೈಯಕ್ತಿಕ ಸಮಾಯೋಜನೆಯನ್ನು ಪುರಷನಿಗೆ ಹೋಲಿಸದೇ ಸಮಗ್ರವಾಗಿ ಪರಿಶೀಲಿಸುವುದು **ಮಹಿಳಾ ಮನೋವಿಜ್ಞಾನ**. ಇದು ಪುರುಷನನ್ನು ಮಾನಕ ಅಥವಾ ಆದರ್ಶವಾಗಿಟ್ಟುಕೊಳ್ಳದೆ ಸ್ತ್ರೀಯನ್ನು ಒಬ್ಬ ವ್ಯಕ್ತಿಯಂತೆ ಅಧ್ಯಯನ ಮಾಡುತ್ತದೆ. **ಸ್ತ್ರೀವಾದಿ ಮನೋವಿಜ್ಞಾನ** ಸಾಮಾಜಿಕ ಸಂರಚನೆ ಮತ್ತು ಲಿಂಗತ್ವವನ್ನು ಕೇಂದ್ರವಾಗಿಟ್ಟುಕೊಂಡು ಮಹಿಳೆಯ ಜೀವನವನ್ನು ಸುತ್ತುವರಿದಿರುವ ಪುರುಷಪ್ರಧಾನ ಸಂಸ್ಕೃತಿ, ಸಾಮಾಜಿಕ, ರಾಜಕೀಯ ಸನ್ನಿವೇಶಗಳಿಗೆ ಆಂತರಿಕ ಕಾರಣಗಳಿಗಿಂತಾ ಹೆಚ್ಚು ಮಹತ್ವ ನೀಡುತ್ತದೆ. ಎಲ್ಲಾ ಸಮಾಜಗಳಲ್ಲೂ ಸ್ತ್ರೀ-ಪುರುಷ ಎಂದು ವರ್ಗೀಕರಣವಿದ್ದು ಲಿಂಗಾಧಾರಿತ ಪಾತ್ರಗಳು, ಅಧಿಕಾರ, ಲಿಂಗತ್ವ ಮುದ್ರಾಂಕಿತಗಳು ಮಹಿಳೆಯ ಜೀವನವನ್ನು ನಿರ್ದೇಶಿಸುತ್ತವೆ. ಇಂತಹ ಪ್ರಭಾವಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಮಹಿಳೆಯ ಹಕ್ಕನ್ನು ರಕ್ಷಿಸುವುದು ಸ್ತ್ರೀವಾದಿ ಮನೋವಿಜ್ಞಾನದ ವಿಷಯ.

ಈ ಎರಡೂ ಅಧ್ಯಯನ ಶಾಖೆಗಳ ಮೂಲ, ವಿಕಾಸ ಮತ್ತು ಉದ್ದೇಶಗಳಲ್ಲಿ ಸಾಮ್ಯತೆ ಇದ್ದು ಇಲ್ಲಿ ಇವೆರಡನ್ನೂ ಒಟ್ಟಿಗೆ ವಿವರಿಸಲಾಗಿದೆ. 19ನೆಯ ಮತ್ತು 20 ನೆಯ ಶತಮಾನದ ಮೊದಲಭಾಗದಲ್ಲಿ ಮನೋವಿಜ್ಞಾನದ ಬಹಳಷ್ಟು ಪ್ರಯೋಗಗಳು, ಅಧ್ಯಯನಗಳು ಹೆಚ್ಚಾಗಿ ಪುರುಷರ ಮೇಲೆ ನಡೆದಿರುತ್ತಿತ್ತು. ಮಾನವ ಎಂದರೆ ಪುರುಷ ಎಂದೇ ಅರ್ಥೈಸಲಾಗುತ್ತಿದ್ದು ಸ್ತ್ರೀಯರ ಮಾನಸಿಕ ಬೆಳವಣಿಗೆ, ವ್ಯಕ್ತಿತ್ವ ವಿಕಾಸ ಮತ್ತು ಅವರ ಸಾಮರ್ಥ್ಯ ಮುಂತಾದವುಗಳ ಬಗ್ಗೆ ಪುರುಷರ ಕಲ್ಪನೆಯೇ ಸತ್ಯ ಎಂದು ಪ್ರತಿಪಾದಿಸಲಾಗುತ್ತಿತ್ತು. ಮಹಿಳೆಯರು ಶೈಕ್ಷಣಿಕ, ಪ್ರಾಯೋಗಿಕ, ಚಿಕಿತ್ಸಕ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದರೂ ಅವರ ಉಲ್ಲೇಖ ಎಲ್ಲಿಯೂ ಸಹ ಇರುತ್ತಿರಲಿಲ್ಲ. ಮನೋವಿಜ್ಞಾನವನ್ನು ಆರಿಸಿಕೊಂಡು, ಆ ಕ್ಷೇತ್ರದಲ್ಲಿ ಕೆಲಸಮಾಡುವವರು ಬಹುತೇಕ ಮಹಿಳೆಯರೇ ಆಗಿದ್ದರೂ ಅದರ ಸಿದ್ಧಾಂತ, ವಾದ ಮತ್ತು ಮಹಿಳೆಯ ಸ್ವರೂಪದ ಬಗ್ಗೆ ವ್ಯಾಖ್ಯಾನಿಸುವವರು ಪುರುಷರೇ. ಹಿಂದಿನ ಅನೇಕ ಶಾಸ್ತ್ರಗಳಂತೆ ಮನೋವಿಜ್ಞಾನ ಕೂಡಾ ಪುರುಷ ಪ್ರಧಾನ ಕ್ಷೇತ್ರವಾಗಿತ್ತು.

ಸ್ತ್ರೀವಾದಿ ಚಳುವಳಿಯ ನಂತರವೇ ಅನೇಕ ಕ್ಷೇತ್ರಗಳ ಬಾಗಿಲು ಮಹಿಳೆಗೆ ತೆರೆದಿದ್ದು. ಮನೋವಿಜ್ಞಾನ ಕ್ಷೇತ್ರದಲ್ಲಿದ್ದ ಲಿಂಗತಾರತಮ್ಯದಿಂದ ಬೇಸತ್ತ ಅನೇಕ ಮಹಿಳಾ ಮನೋವಿಜ್ಞಾನಿಗಳು ಅದರಿಂದ ಹೊರಬಂದು ತಮ್ಮದೇ ಆದ ವಿಧಾನಗಳನ್ನಾಧರಿಸಿ

ಸ್ತ್ರೀಪ್ರಧಾನ ಮನೋವಿಜ್ಞಾನ ರಚಿಸಿದರು. ಮೊದ ಮೊದಲಿಗೆ ಸಲಿಂಗಿಗಳ ಸಮಸ್ಯೆ ಅವರ ಜೀವನಶೈಲಿ ಮುಂತಾದವು ಅಧ್ಯಯನಕ್ಕೆ ವಸ್ತುವಾಯಿತು. ಸ್ತ್ರೀವಾದಿ ಮನೋವಿಜ್ಞಾನ ಸ್ತ್ರೀ ಕೇಂದ್ರಿತ ಸಂಶೋಧನೆ, ಸ್ತ್ರೀ ಸಂವೇದಿ ವಿಧಾನಗಳನ್ನು ಬೆಳೆಸಿತು. ಅನೇಕ ಸ್ತ್ರೀವಾದಿಗಳಲ್ಲಿ ಮಾನಸಿಕ ಕ್ರಿಯೆಯನ್ನು ಹೆಣ್ಣು ಮಾತ್ರ ಹೆಣ್ಣನ್ನು ಅಧ್ಯಯನ ಮಾಡಿ ಹೆಣ್ಣಿಗೆ ಮಾತ್ರ ತಿಳಿಯುವಂತೆ ಹೇಳಬಲ್ಲಳು ಎಂಬ ಧೊರಣೆ ಇತ್ತು. ನಂತರ ಇಂತಹ ತೀಕ್ಷ್ಣ ಪ್ರತಿಕ್ರಿಯೆಗಳು ಕಡಮೆಯಾಗಿ ಮನೋವಿಜ್ಞಾನದಲ್ಲಿದ್ದುಕೊಂಡೇ ಮಹಿಳೆಯರನ್ನು ವಸ್ತುನಿಷ್ಠವಾಗಿ ಪ್ರತಿಪಾದಿಸುವ ಕೆಲಸ ಏಕೆ ಮಾಡಬಾರದು ಎಂಬ ಆಲೋಚನೆ ಬಲಿಯಿತು. ಹೀಗಾಗಿ ಮಹಿಳಾ ಮನೋವಿಜ್ಞಾನ ಹುಟ್ಟಿತು.

ಸ್ತ್ರೀವಾದಿ ಚಳುವಳಿಯಿಂದಾದ ಮುಖ್ಯ ಬದಲಾವಣೆಯೆಂದರೆ, ಎಲ್ಲಾ ವಿಷಯಗಳನ್ನೂ ಮಹಿಳಾ ದೃಷ್ಟಿಕೋನದಿಂದ ಪರಿಶೀಲನೆ ಮಾಡುವ ಅವಕಾಶ ಹುಟ್ಟಿದ್ದು. ಸ್ತ್ರೀವಾದಿಗಳು, ಮನೋವಿಜ್ಞಾನ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯ ಶೋಷಣೆಯನ್ನು ಬಲಗೊಳಿಸುವ ಪ್ರತಿಗಾಮಿ ಶಾಸ್ತ್ರ; ಮಹಿಳೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ಪುರುಷ ಮುದ್ರಾಂಕಿತಗಳು ಮತ್ತು ಅವರ ನಿಯಮಗಳಿಗೆ ಹೊಂದುವಂತೆ ತಿರುಚಿ ವಿಕೃತಗೊಳಿಸಿದೆ; ಶೈಕ್ಷಣಿಕ ಹಾಗೂ ವೃತ್ತಿಪರ ಸಂಸ್ಥೆಗಳು ಮನೋವಿಜ್ಞಾನವನ್ನು ಉಪಯೋಗಿಸಿಕೊಂಡು ಮಹಿಳೆಯನ್ನು ಮೂಲೆಗೊತ್ತಿ ಅವಳ ಆಸ್ತಿತ್ವಕ್ಕೆ ಧಕ್ಕೆ ತಂದಿದೆ; ಮಹಿಳೆ ಅನುಭವಿಸುವ ಎಲ್ಲಾ ಮಾನಸಿಕ ತೊಂದರೆಗಳಿಗೆ ಅವಳ ದೇಹವನ್ನೇ ಕಾರಣ ಮಾಡಿ ಸಾಮಾಜಿಕ, ರಾಜಕೀಯ ದಬ್ಬಾಳಿಕೆಗೆ ಕುರುಡಾಗಿದೆ; ಗಂಡು ಮತ್ತು ಗಂಡಿನ ಚಟುವಟಿಕೆಗಳನ್ನು ಮಾನಕವಾಗಿಟ್ಟುಕೊಂಡು "ಗಂಡಿನಂತಿಲ್ಲದ" ಕಾರಣಕ್ಕೆ ಹೆಣ್ಣನ್ನು ಒಂದು ವೈಪರಿತ್ಯವೆಂದು ಪರಿಗಣಿಸಲಾಗಿದೆ; ಮಹಿಳೆ ಬುದ್ಧಿಶಕ್ತಿ, ನೈತಿಕತೆ ಮತ್ತು ಸಾಮರ್ಥ್ಯದಲ್ಲಿ ಗಂಡಿಗಿಂತಾ ಹೀನಳು ಎಂಬರ್ಥ ಬರುವಂತೆ ಸಂಶೋಧನೆಗಳ ಮಾಹಿತಿಯನ್ನೂ ತಿರುಚಲಾಗಿದೆ; ಲಿಂಗಬೇಧ, ಅಧಿಕಾರ ಮತ್ತು ಸ್ಥಾನ-ಮಾನಗಳಲ್ಲಿ ಇರುವ ವ್ಯತ್ಯಾಸ ಹೆಣ್ಣು-ಗಂಡಿನ ವರ್ತನೆಯಲ್ಲಿ ಎಂತಹ ವ್ಯತ್ಯಾಸ ತರಬಹುದೆಂದು ಮನೋವಿಜ್ಞಾನಿಗಳು ಆಲೋಚಿಸಿಲ್ಲ; ಸಮಾಜ ನಿರೀಕ್ಷಿಸುವಂತೆ ಹೆಣ್ಣು ಇದ್ದರೆ, ಅವಳನ್ನು ಪರಾವಲಂಬಿ, ನಿಷ್ಕ್ರಿಯಳು, ಭಾವನಾತ್ಮಕಳು ಎಂದು ಹೀಯಾಳಿಸುತ್ತಾರೆ; ಅವಳು ಗಂಡಿನಂತೆ ಹೊರಜಗತ್ತಿನಲ್ಲಿ ತನ್ನನ್ನು ಗುರುತಿಸಿಕೊಳ್ಳಲು ಹೋದರೆ ಅದನ್ನು "ಹೆಣ್ಣಿನಂತಿರದ" ಅಪಸಾಮಾನ್ಯತೆ ಎನ್ನುತ್ತಾರೆ; ಚಿಕಿತ್ಸೆಯ ನೆಪದಲ್ಲಿ ಅವಳನ್ನು ಶೋಷಿಸುವ ಸಮಾಜಕ್ಕೆ ಹೊಂದಿಕೊಂಡು ಹೋಗುವಂತೆ ಬಲವಂತ ಮಾಡುತ್ತಾರೆ ಎಂದು ಮನೋವಿಜ್ಞಾನವನ್ನು ಕಟುವಾಗಿ ಟೀಕಿಸಿದ್ದ ಸಾರಾಂಶವಿದು,

ಈ ಶಾಖೆಗಳು ಒಬ್ಬ ವ್ಯಕ್ತಿ, ಒಂದು ಸಿದ್ಧಾಂತದ ಅಥವಾ ಒಂದು ವಿಷಯವನ್ನು ಕೇಂದ್ರೀಕರಿಸಿ, ಒಂದು ನಿಗದಿತ ಸಮಯದಲ್ಲಿ ಹುಟ್ಟಿದ ಅಧ್ಯಯನ ವಿಷಯಗಳಲ್ಲ. ಸಮಾಜದಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ, ರಾಜಕಾರಣದಲ್ಲಿ ಆದ ಬದಲಾವಣೆಗಳು ಮನೋವಿಜ್ಞಾನದ ಮೇಲೂ ಪರಿಣಾಮ ಬೀರಿದವು. ಸ್ತ್ರೀವಾದಿ ಮನೋವಿಜ್ಞಾನ ಎಂಬ ಪದವನ್ನು ಮೊದಲಬಾರಿಗೆ ಕೆರೆನ್ ಹಾರ್ನಿ (Karen Horney) ಬಳಸಿದ್ದು, 1922ರಲ್ಲಿ ಹಿಂದೆ



ಜೀನ್ ಬೇಕರ್ ಮಿಲ್ಲರ್ (1927-2006)

ಮಹಿಳೆಯರ ಬಗ್ಗೆ ಇದ್ದ ನಂಬಿಕೆಗಳು, ಸಂಬಂಧಗಳು, ಮತ್ತು ಅವರ ಮೇಲೆ ಸಮಾಜ ಬೀರುವ ಪರಿಣಾಮವನ್ನು "Feminine Psychology (ಫೆಮಿನಿನ್ ಸೈಕಾಲಜಿ)" ಎಂಬ ತನ್ನ ಕೃತಿಯಲ್ಲಿ ವಿಶ್ಲೇಷಿಸಿದ್ದಳು. 1953 ರಲ್ಲಿ ಸಿಮೋನ್ ದಿ ಬೂವಾ (Simone de Beauvoir) ತನ್ನ "Second Sex (ಸೆಕೆಂಡ್ ಸೆಕ್ಸ್)" ಎಂಬ ಪುಸ್ತಕದಲ್ಲಿ 'ಮಹಿಳಾ ವಿಮೋಚನೆ'ಯ ವಿಷಯ ಎತ್ತಿದಳು. 1962 ರಲ್ಲಿ ನೆಯೋಮಿ ವೆಸ್ಟನ್ (Naomi Weston) ಹಾರ್ವರ್ಡ್ ನಲ್ಲಿ ಪುರುಷರಿಗೆ ಮೀಸಲಾಗಿದ್ದ ಗ್ರಂಥಾಲಯದ ಮುಂದೆ ಪ್ರಥಮ ಮಹಿಳಾ ಪ್ರತಿಭಟನೆಯನ್ನು ಸಂಘಟಿಸಿದಳು. 1963 ರಲ್ಲಿ ಪ್ರಕಟವಾದ ಬೆಟ್ಟಿ ಫ್ರೀಡನ್‌ಳ "The Feminine Mystique (ದ ಫೆಮಿನಿನ್ ಮಿಸ್ಟೀಕ್)" ಅತ್ಯಂತ ಜನಪ್ರಿಯವಾಯಿತು. 1966ರಲ್ಲಿ ನ್ಯಾಶನಲ್ ಆರ್ಗನೈಜ಼ೇಶನ್ ಫಾರ್ ವಿಮೆನ್ (National Organization for Women) ಸ್ಥಾಪಿತವಾಯಿತು. 1969ರಲ್ಲಿ ತಮ್ಮ ವಾರ್ಷಿಕ ಸಮಾವೇಶದ ಸಂದರ್ಭದಲ್ಲಿ ಅಮೇರಿಕನ್ ಸೈಕಲಾಜಿಕಲ್ ಅಸೋಸಿಯೇಷನ್‌ನ ಸದಸ್ಯರು ಅಸೋಸಿಯೇಷನ್ ಫಾರ್ ವಿಮೆನ್ ಇನ್ ಸೈಕಾಲಜಿ (Association for Women in Psychology) ಸಂಸ್ಥೆಯನ್ನು ಸ್ಥಾಪಿಸಿದ್ದು ಆ ಸಮಾವೇಶದಲ್ಲಿ ಭಾಗವಹಿಸಿದ ಅನೇಕ ಮಹಿಳಾ ಗುಂಪುಗಳು ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಇರುವ ಲಿಂಗಬೇಧವನ್ನು ಚರ್ಚೆಗೆ ತಂದವು. ಈ ಮಧ್ಯೆ ಅನೇಕ ಮಹಿಳಾ ಸಂಶೋಧಕಿಯರು, ಲೇಖಕಿಯರು ತಮ್ಮ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದರು. ಸಂಸ್ಥೆ, ಆಸ್ಪತ್ರೆ, ಶಿಕ್ಷಣಾಲಯಗಳ ಮುಖ್ಯಸ್ಥೆಯರಾದರು. 1973ರಲ್ಲಿ ಅಮೇರಿಕನ್ ಸೈಕಲಾಜಿಕಲ್ ಅಸೋಸಿಯೇಷನ್‌ಗೆ ಮಹಿಳಾ ಮನೋವಿಜ್ಞಾನದ ಹೊಸಶಾಖೆ (35) ಸೇರಿತು. ಈ ಮಧ್ಯೆ ಬ್ರಿಟನ್, ಕೆನಡಾ ಮುಂತಾದ ಕಡೆ, ಆಫ್ರಿಕನ್–ಅಮೆರಿಕನ್ ಮಹಿಳೆಯರು, ಅಲ್ಪಸಂಖ್ಯಾತರು, ಸಲಿಂಗಕಾಮಿಗಳು ಮುಂತಾದವರ ಹಿತ ರಕ್ಷಿಸುವ ಸಂಸ್ಥೆಗಳು ಹುಟ್ಟಿಕೊಂಡವು.



ಎಲಿನೋರ್ ಮ್ಯಾಕೊಬಿ (1917-

1976 ರಲ್ಲಿ ಜೀನ್ ಬೇಕರ್ ಮಿಲ್ಲರ್ "The New Psychology of Women (ದಿ ನ್ಯೂ ಸೈಕಾಲಜಿ ಆಫ್ ವಿಮೆನ್)" ಎಂಬ ಪುಸ್ತಕದಲ್ಲಿ ಹಳೆಯ ಸಿದ್ಧಾಂತಗಳನ್ನು ಪ್ರಶ್ನಿಸಿ ಸ್ತ್ರೀಗುಣದ ಬಾಂಧವ್ಯಾತ್ಮಕ (Relational Model) ಮಾದರಿಯನ್ನು ವಿವರಿಸಿದಳು. 70ರ ದಶಕದಲ್ಲಿ ಅನೇಕ ಮಹಿಳಾ ಮನೋವಿಜ್ಞಾನಿಗಳು ಮುಖ್ಯವಾಹಿನಿಯೊಳಗೆ ಇದ್ದುಕೊಂಡೇ ಮಹಿಳೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ತಿದ್ದಿ, ಹೆಣ್ಣಿನ ಬಗ್ಗೆ ಇರುವ ಪೂರ್ವಾಗ್ರಹಗಳು, ಊಹೆಗಳನ್ನು ಸತ್ಯದಿಂದ ಬೇರ್ಪಡಿಸಿ ವೈಜ್ಞಾನಿಕ ಮಾಹಿತಿಯನ್ನು ಅಳವಡಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿಕೊಂಡರು. ಎಲಿನೋರ್ ಮ್ಯಾಕೊಬಿ (Eleanor Maccoby) ತನ್ನ ಸಂಶೋಧಕಾ ಸಹಾಯಕಿ ಕ್ಯಾರೆಲ್ ಜ್ಯಾಕಲಿನ್ (Carol Jacqueline) ಜೊತೆ ಸಂಶೋಧನೆಗಳನ್ನೆಲ್ಲಾ ಪರೀಕ್ಷಿಸಿ ಮಾನಸಿಕ ಸಾಮರ್ಥ್ಯಗಳಲ್ಲಿ ನಿಜವಾದ

ಲಿಂಗವ್ಯತ್ಯಾಸಗಳನ್ನು ಪಟ್ಟಿಮಾಡಿ ತಮ್ಮ "The Psychology of Sex Differences (ದ ಸೈಕಾಲಜಿ ಆಫ್ ಸೆಕ್ಸ್ ಡಿಫರೆನ್ಸ್ಸ್)" (1974) ನಲ್ಲಿ ಪ್ರಕಟಿಸಿದರು. ಇಂಗಾ ಬ್ರೋವರ್ಮನ್ (Inge Broverman) ಮತ್ತು ಫಿಲ್ಲಿಸ್ ಚೆಸ್ಲರ್ (Phyllis Chesler) ನಂತ ವಿದ್ವಾಂಸೆಯರು ಮಾನಸಿಕ ರೋಗನಿದಾನ ಮತ್ತು ಚಿಕಿತ್ಸೆಯಲ್ಲಿ ಹೆಣ್ಣಿನ ಗುಣಗಳು, ಅವಳ ಸಹಜ ದೈಹಿಕ ಕ್ರಿಯೆಗಳಿಗೆ ಹೇಗೆ ಅಪಸಾಮಾನ್ಯತೆಯನ್ನು ಆರೋಪಿಸಲಾಗುತ್ತದೆ ಎಂದು ಮನೋವೈದ್ಯಕೀಯದಲ್ಲಿ ಲಿಂಗ ಭೇದಭಾವ (Sexism)ದ ಪ್ರಭಾವವನ್ನು ಎತ್ತಿ ತೋರಿಸಿದರು. 90ರ ದಶಕದಲ್ಲಿ ಸೀಲಿಯಾ ಕಿಟ್ಸಿಂಗರ್ (Celia Kitzinger), ಸ್ಯೂ ವಿಲ್ಕಿನ್ಸನ್ (Sue Wilkinson) ಮುಂತಾದವರು ಮುಖ್ಯವಾಹಿನಿಯ ಹೊರಗಿನಿಂದ ಮನೋವಿಜ್ಞಾನದ ಅಸಮತೋಲನ ಸರಿಪಡಿಸುವ ಕೆಲಸ ಮಾಡಿದರು.



ಸ್ಯಾಂಡ್ರಾ ಬೆಮ್
(1944-2014)

ಗಿಲಿಗನ್ ಲಾರೆನ್ಸ್ ಕೊಹ್ಲ್‌ಬರ್ಗ್ ಬರಿ ಅನುಕೂಲಸ್ಥ ಬಿಳಿ ಬಾಲಕರ ಮೇಲೆ ನಡೆಸಿದ ಅಧ್ಯಯನದಿಂದ ಬಾಲಕಿಯರ ನೈತಿಕವಿಕಾಸದ ಬಗ್ಗೆ ಅಸಮಂಜಸ ವರದಿ ಮಾಡಿದ್ದನ್ನು ವಿರೋಧಿಸಿ ತನ್ನ ಅಧ್ಯಯನದ ಫಲಿತಾಂಶವನ್ನು "In a Different Voice: Psychological Theory and Women's Development (ಇನ್ ಎ ಡಿಫರೆಂಟ್ ವಾಯ್ಸ್: ಸೈಕಲಾಜಿಕಲ್ ಥಿಯರಿ ಆನ್ ದ ವಿಮೆನ್ಸ್ ಡೆವೆಲಪ್ಮೆಂಟ್)" 1982ರಲ್ಲಿ ಹೊರತಂದಳು. ಮ್ಯಾಕೊಬಿ ಮತ್ತು ಗಿಲಿಗನ್‌ರ ಕೆಲಸದಿಂದ ಬಾಲಕಿಯರ ವಿಕಾಸವನ್ನು ವಸ್ತುನಿಷ್ಠವಾಗಿ ಅರ್ಥಮಾಡಿಕೊಳ್ಳಲು ಸಹಾಯವಾಯಿತು. ಸ್ಯಾಂಡ್ರಾ ಬೆಮ್ (Sandra Bem) ಜಾಹಿರಾತುಗಳಲ್ಲಿ ಹೆಣ್ಣನ್ನು ಚಿತ್ರಿಸುವುದರ ಬಗ್ಗೆ ಆಸಕ್ತಳಾದವಳು ಲಿಂಗಪಾತ್ರಗಳ ಬಗ್ಗೆ ಹೆಚ್ಚು ಸಂಶೋಧನೆಯಲ್ಲಿ ತೊಡಗಿದಳು. ಇವಳು 'ಆಂಡ್ರೋಜಿನಿ (Androgyny)' ಎಂಬ ಸ್ತ್ರೀ-ಪುರುಷ ಎರಡು ಲಿಂಗಗಳ ಗುಣಗಳನ್ನು ಹೊಂದಿರುವ ವ್ಯಕ್ತಿತ್ವವನ್ನು ಗುರುತಿಸಿ ಲಿಂಗತ್ವದ ಪಾತ್ರ ಏನೆಂಬುದನ್ನು ಅರಿಯಲು ಬೆಮ್ ಲಿಂಗ-ಪಾತ್ರ ಸೂಚಿ (Bem Sex-Role Inventory) ತಯಾರಿಸಿದಳು.

ಹಿಂಸೆ, ಕೌಟುಂಬಿಕ ದೌರ್ಜನ್ಯ, ಮಹಿಳೆಯ ಮಾನಸಿಕ ತೊಂದರೆಗಳು, ವೃತ್ತಿಜೀವನಕ್ಕೆ ಅಡೆ-ತಡೆ, ಬಹುಪಾತ್ರಗಳನ್ನು ನಿರ್ವಹಿಸುವುದರಿಂದ ಅವಳು ಅನುಭವಿಸುವ ಒತ್ತಡಗಳು ಮುಂತಾದ ವಿಷಯಗಳನ್ನು ಮಹಿಳಾ ಮನೋವಿಜ್ಞಾನಿಗಳು ಸಂಶೋಧಿಸಿದ್ದಾರಲ್ಲದೆ ತೆರೆಮರೆಯಲ್ಲಿ ಕೆಲಸ ಮಾಡಿದ ಮಹಿಳಾ ವಿಜ್ಞಾನಿಗಳು, ವಿದ್ವಾಂಸೆಯರು, ಸೇವಾಕರ್ತೆಯರ ಜೀವನದ ಮೇಲೆ ಬೆಳಕು ಚೆಲ್ಲಿದ್ದಾರೆ. ಮಹಿಳೆಯರ ವಸ್ತುನಿಷ್ಠ ಚಿತ್ರಣ, ಅವರ ಕೊಡುಗೆಗೆ ಸಲ್ಲಬೇಕಾದ ಸನ್ಮಾನ, ಅವರ ವಿಕಾಸಕ್ಕೆ ಸಮಾನ ಅವಕಾಶ, ಅವರ ಶೋಷಣೆಯ ವಿರುದ್ಧ ಹೋರಾಟ - ಇವು ಸ್ತ್ರೀವಾದಿ ಮತ್ತು



ಕ್ಯಾರೆಲ್ ಗಿಲಿಗನ್
(1936)

ಮಹಿಳಾ ಮನೋವಿಜ್ಞಾನಿಗಳ ಗುರಿ. 2011ರಲ್ಲಿ ಮೆಲ್ಬಾ ವಾಸ್ಕೆಝ್ (Melba Vasquez) ಎಂಬ 'ಬಿಳಿಯಲಲ್ಲದ' ಮೊದಲ ಆದರೆ 13ನೆಯ ಮಹಿಳೆ ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಷನ್‌ನ ಅಧ್ಯಕ್ಷೆಯಾಗಿ ಆಯ್ಕೆಯಾದ್ದದ್ದು ಆಶಾದಾಯಕ ಬೆಳವಣಿಗೆಯಾಗಿದೆ.